2830 (4090)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕು ಚಾರಾ ಗ್ರಾಮದ ಹಂದಿಕಲ್ಲು ಎಂಬಲ್ಲಿ ಮಿನಿ ವಿದ್ಯುತ್ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ವಿದ್ಯುತ್ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯ ಅಂದಾಜು ವಿಸ್ತೀರ್ಣವೆಷ್ಟು (ಖಾಸಗಿ ಪಟ್ಟಾ) ಕಂದಾಯ ಮತ್ತು ಅರಣ್ಯ ಭೂಮಿಗಳ ವಿವರ ತಿಳಿಸುವುದು?

ಇ) ಈ ಯೋಜನೆಯ ಅನಿಶ್ಚಿತತೆಯಿಂದ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೆ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಕಾರ್ಕಳ ತಾಲ್ಲೂಕು ಚಾರಾ ಗ್ರಾಮದ ಹಂದಿಕಲ್ಲು ಎಂಬಲ್ಲಿ ಯಾವುದೇ ಕಿರು ಜಲವಿದ್ಯುತ್ ಯೋಜನೆಯು ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ವಿಷಯ: ಬೆನ್ನಿಗಾನಹಳ್ಳಿ ಕೆರೆಯ ಜಾಗವನ್ನು ಅಕ್ರಮವಾಗಿ ಆಕ್ರಮಿಸಿರುವುದು.

2831 (3567)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಎಸ್.ಹೆಚ್.4 ಮದ್ರಾಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಬೆನ್ನಿಗಾನಹಳ್ಳಿ ಕೆರೆಯ ವಿಸ್ತೀರ್ಣ ಎಷ್ಟು?

ಆ) ಶ್ರೀ ಲಕ್ಷ್ಮಣರಾವ್ ಸಮಿತಿಯ ವರದಿಯಲ್ಲಿ ಕೆರೆಗಳನ್ನು ಸುರಕ್ಷಿತವಾಗಿ ಕಾಪಾಡುವ ಬಗ್ಗೆ ಮಾಡಿರುವ ಪಟ್ಟಿಯಲ್ಲಿ ಈ ಕೆರೆಯನ್ನೂ ಸಹ ಸೇರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಈ ಕೆರೆಯನ್ನು ಸಮಾಜ ಕಂಟಕರು ಉದ್ದೇಶಪೂರ್ವಕವಾಗಿಯೇ ಕೆರೆಯನ್ನು ಎರಡೂ ಕಡೆಯಿಂದಲೂ ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ?

ಈ) ಹಾಗಿದ್ದಲ್ಲಿ ಅತಿಕ್ರಮಿಸುತ್ತಿರುವವರ ವಿವರಗಳನ್ನು ಒದಗಿಸುವುದು?

ಉ) ಈ ರೀತಿ ಕೆರೆಯ ಜಾಗವನ್ನು ಅತಿಕ್ರಮಿಸುವುದನ್ನು ಸಂಬಂಧಿಸಿದ ಇಂಜನಿಯರ್‌ಗಳು ನೋಡುತ್ತಿದ್ದು, ಯಾವುದೇ ಕ್ರಮ ಜರುಗಿಸದಿರುವುದರಿಂದ, ನೀರಾವರಿ ಇಲಾಖೆಯು ಅತಿಕ್ರಮಣಗಾರರೊಂದಿಗೆ ಶಾಮೀಲಾಗಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ಸರ್ಕಾರದವರು ಅವರ ಮೇಲೆ ಉಗ್ರ ಕ್ರಮಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವರೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 20.64 ಹೆಕ್ಟೇರ್‌ಗಳು.

ಆ) ಸೇರಿದೆ.

ಇ) ಬಂದಿದೆ.

ಈ) ಖಾಸಗಿ ವ್ಯಕ್ತಿಗಳು-ಸುಮಾರು 8 ಎಕರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ-ಸುಮಾರು 15 ಎಕರೆ ರೈಲ್ವೆ ಇಲಾಖೆ-ಸುಮಾರು 5 ಎಕರೆ

ಉ ಮತ್ತು ಊ) ಕೆರೆಯ ಜಾಗವನ್ನು ಅತಿಕ್ರಮಿಸಿ ಅಕ್ರಮ ಮಾಡಿರುವವರಿಗೆ ನೋಟಿಸನ್ನು ಜಾರಿ ಮಾಡಿ ಅವರನ್ನು ಅಲ್ಲಿಂದ ಎಬ್ಬಿಸಲು ಕ್ರಮ ತೆಗೆದುಕೊಳ್ಳಲು ಸಣ್ಣ ನೀರಾವರಿ ದಕ್ಷಿಣ ವಲಯದ ಮು.ಇಂ.ರವರಿಗೆ ಆದೇಶ ನೀಡಲಾಗಿದೆ. ನೀರಾವರಿ ಇಲಾಖೆಯು ಅತಿಕ್ರಮಣಗಾರರೊಂದಿಗೆ ಶಾಮೀಲಾಗಿರುವುದಿಲ್ಲ.

ವಿಷಯ: ಬೆಂಗಳೂರು ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಲಿಯ ಸಲಹಾ ಸಮಿತಿ

2832 (3970)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪ್ರಜಾ ಪ್ರತಿನಿಧಿಗಳ ಸಭೆಯನ್ನು ಕರೆಯುವ ವ್ಯವಸ್ಥೆ ನಿಯಮ ಏನಾದರೂ ಇದೆಯೇ?